ಕ್ರಿ. ಮಿ. ನಂಬರ: **576/ 2022**

ಪಿಡಬ್ಲೂ**-1**

**ಹೆಚ್ಚುವರಿ ನ್ಯಾಯಿಕ ದಂಡಾಧಿಕಾರಿಗಳು, ಗೋಕಾಕ ಇವರ ನ್ಯಾಯಾಲಯ**
**ಸಾಃಗೋಕಾಕ**

| | | |
|---|---|---|
| ಸಾಕ್ಷಿದಾರರ ಹೆಸರು | : | ರುಕ್ಮವ್ವ ಕೆಂಚಪ್ಪ ಶಿಂತ್ರಿ |
| ವಯಸ್ಸು | : | 52 ವರ್ಷ |
| ಉದ್ಯೋಗ | : | ಮನೆ ಕೆಲಸ |
| ಸಾಕೀನ | : | ಬಸಳಿಗುಂದಿ |

ದಿಃ **25-02-2025** ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಭೋಧಿಸಲಾಯಿತು.

ಮುಖ್ಯ ವಿಚಾರಣೆಃ ಅರ್ಜಿದಾರ ಪರ ವಕೀಲರಿಂದ

ಈ ಪ್ರಕರಣವನ್ನು ನಾನು ಪೋಟಗಿಗಾಗಿ ಸಲ್ಲಿಸಿರುತ್ತೇನೆ. ಎದುರುದಾರ ನನ್ನ ಗಂಡ ಆಗಿರುತ್ತಾರೆ. ನನ್ನ ಹಾಗೂ ಎದುರುದಾರರ ಮದುವೆ ಈಗ ಸುಮಾರು 35 ವರ್ಷದ ಹಿಂದೆ ಆಗಿರುತ್ತದೆ. ನಮ್ಮ ಮದುಗೆ ಎದುರುದಾರರ ಮನೆಯ ಮುಂದೆ ಅಡಿಬಟ್ಟೆಯಲ್ಲಿ ಆಗಿರುತ್ತದೆ. ಮದುವೆ ಆದ ನಂತರ ನಾನು ಬಾಳ್ವೆ ಮಾಡಲು ಅವರ ಮನೆಗೆ ಹೋಗಿರುತ್ತೇನೆ. ನಮ್ಮ ವೈವಾಹಿಕ ಜೀವನದಿಂದ ನಮಗೆ ಒಬ್ಬ ಮಗಳು ಜನಿಸಿರುತ್ತಾರೆ. ಸದರಿ ಅವರಿಗೆ ಈಗ ವಯಸ್ಸು 25 ವರ್ಷ ಆಗಿರುತ್ತದೆ. ನನ್ನ ಮದುವೆ ಆದ ನಂತರ ನನಗೆ ಮಗು ಜನಿಸುವವರೆಗೆ ಎದುರುದಾರ ನನ್ನನ್ನು ಚೆನ್ನಾಗಿ ನೋಡಿಕೊಂಡಿರುತ್ತಾರೆ. ಆನಂತರ ನನಗೆ ಹೆಣ್ಣು ಮಗು ಜನಿಸಿರುತ್ತದೆ ಎಂದು ಎದುರುದಾರ ನನ್ನನ್ನು ಹೊಡಿ ಬಡಿ ಮಾಡುವುದು ಹಾಗೂ ನಮ್ಮ ತವರು ಮನೆಯಿಂದ ಬೆಳ್ಳಿ, ಬಂಗಾರ ಹಾಗೂ ಉಡುಗೊರೆ ತೆಗೆದುಕೊಂಡು ಬರಲು ಕಿರುಕುಳ ನೀಡುತ್ತಿದ್ದರು. ನನ್ನ ಸೀಮಂತ ಕಾರ್ಯದಲ್ಲಿ ಎದುರುದಾರ ನನಗೆ ನಾನು ತವರು

ಮನೆಯಿಂದ ಬೆಳ್ಳಿ, ಬಂಗಾರ ಹಾಗೂ ಉಡುಗೊರೆ ತೆಗೆದುಕೊಂಡು ಬಂದರೆ ಮಾತ್ರ ಅವರು ನನ್ನನ್ನು ಮನೆಯಲ್ಲಿ ಇಟ್ಟುಕೊಳ್ಳುತ್ತಾರೆ ಎಂದು ಕಿರುಕುಳ ನೀಡಿರುತ್ತಾರೆ. ನನ್ನ ಮಗಳು ಜನಿಸಿದ ನಂತರ ನಾನು ನನ್ನ ಮಗಳನ್ನು ಕರೆದುಕೊಂಡು ಗಂಡನ ಮನೆಗೆ ಹೋದಾಗ ಅವರು ಹೆಣ್ಣು ಮಗು ಜನಿಸಿರುತ್ತದೆ ಎಂದು ನನಗೆ ಕಿರುಕುಳ ನೀಡುತ್ತಿದ್ದರು.

ತದನಂತರ ನಾನು ನಮ್ಮ ಊರ ಹಿರಿಯರನ್ನು ಕರೆದುಕೊಂಡು ಹೋಗಿ ಎದುರುದಾರನಿಗೆ ಬುದ್ದಿ ಮಾತು ಹೇಳಿದರೂ ಕೂಡಾ ಎದುರುದಾರ ಅವರ ಮಾತು ಕೇಳಿರುವುದಿಲ್ಲ. ಎದುರುದಾರ ನನ್ನನ್ನು ಮನೆಯಿಂದ ಹೊರಗೆ ಹಾಕಿ 25 ವರ್ಷಗಳು ಆಗಿರುತ್ತವೆ. ಅಂದಿನಿಂದ ನಾನು ಬೇರೆಯವರಿಂದ ಸಾಲ ಮಾಡಿ ಜೀವನ ಮಾಡುತ್ತಿದ್ದೇನೆ. ನನಗೆ ದುಡಿಯಲು ಆಗುವುದಿಲ್ಲ. ನನಗೆ ಆರಾಮ ಇರುವುದಿಲ್ಲ. ನನಗೆ ಬಿಪಿ ಹೆಚ್ಚು ಕಮ್ಮಿ ಆಗುತ್ತದೆ. ನಾನು ಔಷಧಿ ತೆಗೆದುಕೊಳ್ಳುತ್ತೇನೆ.

ಎದುರುದಾರ ಅವರದೆ ಸ್ವಂತ ಹೊಲದಲ್ಲಿ ಕೆಲಸ ಮಾಡುತ್ತಾರೆ. ಸದರಿ ಅವರಿಗೆ 6 ಎಕರೆ ಜಮೀನು ಇರುತ್ತದೆ. ಸದರಿ ಜಮೀನದಲ್ಲಿ ಅವರು ಕಬ್ಬು, ಸದಕ, ಗೋದಿ, ಗೊಂಜಾಳ, ಸಜ್ಜಿ ಬೆಳೆಸುತ್ತಾರೆ. ಅವರು ಬೇರೆಯವರ ಹೊಲ ಕೂಡಾ ಮಾಡುತ್ತಾರೆ. ಸದರಿ ಜಮೀನುಗಳು ನೀರಾವರಿ ಜಮೀನುಗಳು ಆಗಿರುತ್ತವೆ. ಸದರಿ ಅವರಿಗೆ ಜಮೀನಿನಿಂದ ವರ್ಷಕ್ಕೆ ಸುಮಾರು 6-7 ಲಕ್ಷ ಆದಾಯ ಬರುತ್ತದೆ. ಸದರಿ ಅವರು ಬಡ್ಡಿ ವ್ಯವಹಾರ ಹಾಗೂ ದನದ ವ್ಯಾಪಾರ ಮಾಡುತ್ತಾರೆ. ಸದರಿ ವ್ಯಾಪಾರದಿಂದ ಅವರಿಗೆ ವರ್ಷಕ್ಕೆ ಸುಮಾರು 4-5 ಲಕ್ಷ ಆದಾಯ ಬರುತ್ತದೆ.

ಎದುರುದಾರನಿಗೆ ಪೋಟಗಿ ಕೊಡುವ ಸಾಮರ್ಥ್ಯ ಇರುತ್ತದೆ. ಎದುರುದಾರ

ಭೀಮವ್ವ ರವರೊಂದಿಗೆ ಅನೈತಿಕ ಸಂಬಂಧ ಇಟ್ಟುಕೊಂಡಿದ್ದು ಅವರಿಗೆ ಒಂದು ಗಂಡು ಮಗು ಕೂಡಾ ಜನಿಸಿರುತ್ತಾರೆ. ಸದರಿ ಮಗುಗೆ ಈಗ 14 ವರ್ಷ ವಯಸ್ಸಾಗಿರುತ್ತದೆ. ನನ್ನ ಮಗಳ ಹೆಸರು ಕಸ್ತೂರಿ ಆಗಿರುತ್ತದೆ. ನನ್ನ ಮಗಳ ಮದುವೆಯನ್ನು ನಾನೇ ಮಾಡಿರುತ್ತೇನೆ. ಎದುರುದಾರ ಯಾವುದೇ ಮದುವೆ ಖರ್ಚನ್ನು ಕೊಟ್ಟಿರುವುದಿಲ್ಲ. ನನ್ನ ಔಷದೋಪಚಾರಕ್ಕೆ ನನಗೆ ತಿಂಗಳಿಗೆ ರೂ.12,000/- ಖರ್ಚು ಬರುತ್ತದೆ. ಎದುರುದಾರನಿಗೆ ನನಗೆ ತಿಂಗಳಿಗೆ ರೂ.12,000/- ಪೋಟಗಿ ಕೊಡುವ ಸಾಮರ್ಥ್ಯ ಇರುತ್ತದೆ. ಈ ಹಿಂದೆ ನಾನು ಪೋಟಗಿಗಾಗಿ ಪ್ರಕರಣವನ್ನು ದಾಖಲಿಸಿದ್ದೆ. ಸದರಿ ಪ್ರಕರಣದಲ್ಲಿ ನಾನು ಎದುರುದಾರನೊಂದಿಗೆ ರಾಜಿ ಆಗಿರುತ್ತೇನೆ. ನನ್ನ ಮಗಳ ಮದುವೆಯನ್ನು ನಾನು ಅಕ್ಕ ಪಕ್ಕದಲ್ಲಿ ಸಾಲ ಮಾಡಿಕೊಂಡು ಮದುವೆ ಮಾಡಿರುತ್ತೇನೆ.

ಮಾನ್ಯ ನ್ಯಾಯಾಲಯಕ್ಕೆ ಕೆಳಕಂಡಂತಹ ದಾಖಲಾತಿಗಳನ್ನು ಹಾಜರು ಪಡಿಸಿರುತ್ತೇನೆ.

| | | |
|---|---|---|
| Ex.P1 | : | ROR extract for the year 2020-21 pertaining to Sy.No.113/1 |
| Ex.P2 | : | ROR extract for the year 2021-22 pertaining to Sy.No.109/1 |
| Ex.P3 | : | ROR extract for the year 2021-22 pertaining to Sy.No.110 |

ಆದ್ದರಿಂದ ಸದರಿ ದಾಖಲಾತಿಗಳನ್ನು ನಿಪಿ-1 ರಿಂದ 3 ಎಂದು ಗುರುತಿಸಲಾಯಿತು. ನನ್ನ ಅರ್ಜಿಯನ್ನು ಪುರಸ್ಕರಿಸಬೇಕೆಂದು ಮಾನ್ಯರವರಲ್ಲಿ ಕೋರುತ್ತೇನೆ.

**<u>ಪಾಟೀ ಸವಾಲುಃ</u>** ಎದುರುದಾರ ಪರ ವಕೀಲರು ಗೈರು ಹಾಜರಿದ್ದು ಪಾಟೀ ಸವಾಲು ಮುಂದೂಡಲಾಯಿತು.

(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸರಿ ಇದೆ

**(ಶ್ರೀಮತಿ. ಸೂರ್ಯ ಪ್ರಭಾ ಎಚ್.ಡಿ)**
**ಹೆ.ದಿ.&ನ್ಯಾ.ದಂ., ಗೋಕಾಕ.**